**ಟೀಚರ್:** ನೀವಿಬ್ಬರು ಅವಳಿ ಜವಳಿ ಮಕ್ಕಳು ತಾನೇ?
**ಸೋಮು–ರಾಮು:** ಹೌದು ಸರ್.
**ಟೀಚರ್:** ತಂದೆ ಹೆಸರು ಸೇಮ್ ಅಲ್ವಾ?
**ಸೋಮು–ರಾಮು:** ಹೌದು ಸರ್.
**ಟೀಚರ್:** ಮತ್ತೆ ಉತ್ತರ ಪತ್ರಿಕೆಯಲ್ಲಿ ತಂದೆ ಹೆಸರು ಬೇರೆ ಬೇರೆ ಬರೆದಿದ್ದೀರಿ?
**ಸೋಮು–ರಾಮು:** ಒಂದೇ ಥರಾ ಇದ್ರೆ, ಕಾಪಿ ಮಾಡಿ ಬರೆದಿದ್ದೀರಿ ಅಂದುಕೊಳ್ಳುತ್ತೀರಿ ಅಂತ ಹಾಗೇ ಬರೆದ್ವಿ ಸರ್.

**ಕಳ್ಳ 1:** ಕದ್ದಿರುವ ಹಣ ಇಲ್ಲೇ ಹಂಚಿಕೊಳ್ಳೋಣ.
**ಕಳ್ಳ 2:** ಬೇಡ, ರಾತ್ರಿಯೆಲ್ಲಾ ನಿದ್ದೆಗೆಟ್ಟಿದ್ದೇವೆ. ಈಗ ಮನೆಗೆ ಹೋಗಿ, ನಾಳೆ ಬೆಳಿಗ್ಗೆ ನೋಡೋಣ.
**ಕಳ್ಳ 1:** ಎಷ್ಟಿದೆ ಅಂತಾದ್ರೂ ನೋಡೋಣ್ವಾ?
**ಕಳ್ಳ 2:** ಬೇಡ, ಬೇಡ. ನಾಳೆ ಬೆಳಿಗ್ಗೆ ಹೇಗಿದ್ರೂ ನ್ಯೂಸ್ ಪೇಪರ್‌ನಲ್ಲಿ ಬರುತ್ತಲ್ವಾ, ಓದಿ ತಿಳಿದುಕೊಳ್ಳೋಣ ಬಿಡು.

ಅಳಿಯನಿಗೆ ತುಪ್ಪ ಹಾಕಲು ಮರೆತ ಅತ್ತೆ. ಅದನ್ನು ನೆನಪಿಸಲು ಹೀಗೆ ಹೇಳಿದ.
**ಅಳಿಯ:** ಅತ್ತೆ, ನಾನು ಬರುವಾಗ ದಾರಿಯಲ್ಲಿ ಹಾವೊಂದು ಎದುರಾಯಿತು. ಅದು ಇಲ್ಲಿಂದ ಆ ತುಪ್ಪದ ಬಟ್ಟಲು ಇದೆಯಲ್ಲ, ಅಷ್ಟುದ್ದ ಇತ್ತು.
**ಅತ್ತೆ:** ಅಯ್ಯೋ ನೆನಪು ಮಾಡಿ ಒಳ್ಳೆಯದು ಮಾಡಿದ್ರಿ ಅಳಿಯಂದಿರೆ. ಮೊನ್ನೆ ನಮ್ಮ ಮನೆಗೂ ಹಾವೊಂದು ಬಂದಿತ್ತು.
**ಅಳಿಯ:** ಆ ಹಾವು ಆ ತುಪ್ಪದ ಬಟ್ಟಲು ಇರುವಷ್ಟು ಉದ್ದ ಇತ್ತೆ?
**ಅತ್ತೆ:** ಇಲ್ಲ ಅಳಿಯಂದಿರೆ ಆ ತುಪ್ಪದ ಬಟ್ಟಲಿನ ಸುತ್ತಳತೆಯಷ್ಟೇ ಇತ್ತು.
ಕೊನೆಗೂ ಅಳಿಯ ತುಪ್ಪವಿಲ್ಲದೆ ಊಟ ಮಾಡಿ ಮೇಲೆದ್ದ.

**ಹೆಂಡತಿ:** ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಸ್ಪರ್ಧೆಯಲ್ಲಿ ನಾನು ಫಸ್ಟ್ ಬಂದಿದ್ದೀನಿ.
**ಗಂಡ:** ಯಾವ ಸ್ಪರ್ಧೆ?
**ಹೆಂಡತಿ:** ಗುಂಡು ಎಸೆತ.
**ಗಂಡ:** ಅಭ್ಯಾಸ ನನ್ನ ಮೇಲೆ ತಾನೇ ಆಗಿರೋದು. ಹೀಗಾಗಿ, ಬಹುಮಾನ ನನಗೆ ಕೊಡು.

**ನಿವೃತ್ತಿ ನೌಕರ:** ನಾನು ನಿವೃತ್ತಿಯಾದ ಮೇಲೆ ಸರ್ಕಾರ ಅರ್ಧ ಪೇಮೆಂಟ್ ಕೊಡುತ್ತಿದೆ.
**ಸ್ನೇಹಿತ:** ಹೌದು ನೌಕರಿಯಿಂದ ನಿವೃತ್ತಿಯಾದ ಮೇಲೆ ಕೆಲಸ ಮಾಡೋದಿಲ್ಲವಲ್ಲ, ಅದಕ್ಕೆ ಅರ್ಧ ಪೇಮೆಂಟ್.
**ನಿವೃತ್ತಿ ನೌಕರ:** ಛೇ ಹಾಗಲ್ಲ, ನಾನು ನೌಕರಿ ಮಾಡುವಾಗಲೇ ಕೆಲಸ ಮಾಡುತ್ತಿರಲಿಲ್ಲ. ಆವಾಗ್ಲೆ ಫುಲ್ ಪೇಮೆಂಟ್ ಬರ್ತಿತ್ತು. ಈಗ ಯಾಕೆ?

**ಟೀಚರ್:** ಗುಂಡ ಶಾಲೆಗೆ ಏಕೆ ಲೇಟು.
**ಗುಂಡ:** ಶಾಲೆ ಬಳಿ ಬೋರ್ಡು ಇತ್ತು ಸರ್.
**ಟೀಚರ್:** ಏನಂತಾ?
**ಗುಂಡ:** ಮುಂದೆ ಶಾಲೆ ಇದೆ ನಿಧಾನವಾಗಿ ಚಲಿಸಿ ಎಂದು.




ಬಂತು... ಬಂತು. ಭಿಕ್ಷೆ ಬಂದ್ರುಪಾಯಿ ಈಗ ಬಂತು.

**ಮಗ:** ಅಪ್ಪ ಏನೂ ಕೆಲಸ ಮಾಡದೆ ಹಣ ಬರುವ ಉದ್ಯೋಗ ಇದ್ದರೆ ಹೇಳು?
**ಅಪ್ಪ:** ಅದು ಹೇಗೆ ಸಾಧ್ಯ? ದುಡಿದರೆ ತಾನೇ ಹಣ ಬರೋದು.
**ಮಗ:** ನಾನು ಏನೂ ಮಾಡಬಾರದು, ಅವರವರು ತಮ್ಮ ಕೆಲಸ ಮಾಡಿಕೊಂಡು ಹೋಗಬೇಕು. ನಮಗೆ ದುಡ್ಡು ಬರುತ್ತಿರಬೇಕು. ಅಂತಹ ದುಡಿಮೆ ಹೇಳಪ್ಪ.
**ಅಪ್ಪ:** ಹಾಗಾದರೆ ಸುಲಭ ಶೌಚಾಲಯ ಶುರು ಮಾಡು.

ಈರುಳ್ಳಿ ಹೆಚ್ಚುತ್ತಿರುವ ಪತಿಯ ಬಳಿ ಬಂದ ಹೆಂಡತಿ ಹೀಗಂದಳು.
**ಪತ್ನಿ:** ನಿಧಾನ ರೀ... ಕೈ ಗಾಯ ಮಾಡಿಕೊಂಡಿರಿ ಹುಷಾರು.
**ಪತಿ:** ನನ್ನ ಮೇಲೆ ಎಷ್ಟು ಕಾಳಜಿ ಪ್ರೀತಿ ಇದೆಯಲ್ಲ ನಿನಗೆ.
**ಪತ್ನಿ:** ಪ್ರೀತಿ ಗೀತಿ ಏನೂ ಇಲ್ಲ. ಇನ್ನಾ ಬಟ್ಟೆ ತೊಳೆಯೋದು, ಬಾಣಲೆ ತಿಕ್ಕೋದಿದೆ.

ಅರೆಹುಚ್ಚ ಎಮ್ಮೆ ಮ್ಯಾಲೆ ಕುಳಿತು ಎಲ್ಲಿಗೋ ಹೊರಟಿದ್ದ. ಅದನ್ನು ನೋಡಿದವರು ಹೀಗಂದರು.
**ಒಬ್ಬ:** ಪೊಲೀಸ್ ಹಿಡಿಯುತ್ತಾರೆ ನಿನ್ನ.
**ಇನ್ನೊಬ್ಬ:** ಹೌದು ಹೆಲ್ಮೆಟ್ ಹಾಕಿಲ್ಲ. ಅದಕ್ಕೆ ನಿನ್ನನ್ನು ಪೊಲೀಸರು ಹಿಡಿಯುತ್ತಾರೆ.
**ಅರೆಹುಚ್ಚ:** ಪೂರಾ ಕಣ್ ಬಿಟ್ಟು ನೋಡ್ರೊ... ಇದು ಟೂ ವೀಲರ್ ಅಲ್ಲ, ಫೋರ್ ವೀಲರ್.

**ಪತ್ನಿ:** ರೀ... ನನಗೆ ಏನಾದರೂ ಆದರೆ, ಏನು ಮಾಡ್ತಿರಾ?
**ಪತಿ:** ಏನು ಮಾಡಬೇಕು ತಿಳಿಯೋದಿಲ್ಲ. ನೀನೇ ಹೇಳ್ತಿಯಲ್ಲ ನಾನು ಹುಚ್ಚ ಅಂತ.
**ಪತ್ನಿ:** ಹಾಗಾದರೆ ಮತ್ತೆ ಮದುವೆಯಾಗೋದಿಲ್ಲ ಅನ್ನಿ.
**ಪತಿ:** ಹುಚ್ಚನನ್ನು ನಂಬೋಕೆ ಆಗುವುದಿಲ್ಲ. ಒಂದಾದರೂ ಆಗಬಹುದು, ನಾಲ್ಕಾದರೂ ಆಗಬಹುದು.

**ತಂದೆ:** ನೀನು ಪಾಸಾದ್ರೂ, ಫೇಲಾದ್ರೂ ಬೈಕ್ ಕೊಡಿಸ್ತೀನಿ.
**ಮಗ:** ಥ್ಯಾಂಕ್ಸ್ ಅಪ್ಪ ನೀನು ಬಹಳ ಒಳ್ಳೆಯವನು.
**ತಂದೆ:** ಪಾಸಾದ್ರೆ ಕಾಲೇಜಿಗೆ ಹೋಗು. ಫೇಲಾದ್ರೆ, ಹಾಲು ಮಾರಾಟಕ್ಕೆ ಹೋಗು.

**ಗಂಡ:** ಶುಗರ್ ಇಲ್ಲ ಅಂದ್ರು.
**ಹೆಂಡತಿ:** ಯಾರು ಡಾಕ್ಟರಾ?
**ಗಂಡ:** ಅಲ್ಲ.
**ಹೆಂಡತಿ:** ಮತ್ತೆ ಇನ್ಯಾರು?
**ಗಂಡ:** ರೇಷನ್ ಅಂಗಡಿಯವರು.

ಸಂಗ್ರಹ: ಸಿ.ಕೆ. ಗಣಪ್ಪನವರ ಮುಂಡರಗಿ